# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 588
2. ಸದಸ್ಯರ ಹೆಸರು : ಶ್ರೀ ಕೆ.ಸಿ.ಕೊಂಡಯ್ಯ
3. ಉತ್ತರಿಸಬೇಕಾದ ದಿನಾಂಕ : 24-09-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮೇಕೆದಾಟು ಯೋಜನೆ ಕಳೆದ ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಉದ್ದೇಶಿಸಿದ್ದು, ಸದರಿ ಯೋಜನೆಯ ರೂ.9000.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯನ್ನು ತಯಾರಿಸಿ, ಕೇಂದ್ರ ಜಲ ಆಯೋಗದ ಅನುಮೋದನೆ ಕೋರಿ ದಿನಾಂಕ:18-01-2019 ರಂದು ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಆ | ಈ ಯೋಜನೆಯಿಂದ ಬೆಂಗಳೂರು ನಗರದ ಕುಡಿಯುವ ನೀರಿಗೆ ಹಾಗೂ ರೈತರ ವ್ಯವಸಾಯಕ್ಕೆ ದೊರೆಯಬಹುದಾದ ನೀರಿನ ಪ್ರಮಾಣವೆಷ್ಟು; | ಸದರಿ ಯೋಜನೆಯಡಿ ಸರ್ವೋಚ್ಚ ನ್ಯಾಯಾಲಯದಿಂದ ಹಂಚಿಕೆಯಾಗಿರುವ 4.75 ಟಿ.ಎಂ.ಸಿ Consumptive use (ಸುಮಾರು 24 ಟಿ.ಎಂ.ಸಿ) ನೀರನ್ನು ಕುಡಿಯುವ ನೀರಿಗಾಗಿ ಬೆಂಗಳೂರು ನಗರಕ್ಕೆ ಮಾತ್ರ ಹಂಚಿಕೆ ಮಾಡಲಾಗಿದ್ದು, ನೀರಾವರಿ ಬಳಕೆಗೆ ಯಾವುದೇ ಅವಕಾಶ ಕಲ್ಪಿಸಿರುವುದಿಲ್ಲ. |
| ಇ | ಮುಳುಗಡೆಯಾಗಲಿರುವ ಅರಣ್ಯ ಮತ್ತು ಕೃಷಿ ಜಮೀನಿನ ವ್ಯಾಪ್ತಿ ಎಷ್ಟು; ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು? | ಪ್ರಸ್ತಾಪಿತ ಯೋಜನೆಗೆ ಒಟ್ಟಾರೆಯಾಗಿ 5252 ಹೆ. ಪ್ರದೇಶ ಅವಶ್ಯವಿದ್ದು, ಇದರಲ್ಲಿ 3181 ಹೆ. ವನ್ಯಜೀವಿ ಪ್ರದೇಶ, 1870 ಹೆ. ಮೀಸಲು ಅರಣ್ಯ ಪ್ರದೇಶ (ಒಟ್ಟಾರೆ ಅರಣ್ಯ ಪ್ರದೇಶ: 5051 ಹೆ.) ಹಾಗೂ 201 ಹೆ. ಕಂದಾಯ ಪ್ರದೇಶವಾಗಿರುತ್ತದೆ.<br><br>ಕೇಂದ್ರ ಜಲ ಆಯೋಗದ CWMA ಇಂದ ಪ್ರಸ್ತಾವನೆಗೆ ಅಗತ್ಯ ಷರಾಗಳನ್ನು ಪಡೆದು ಹಾಗೂ ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳ ತೀರುವಳಿ ಪಡೆಯಬೇಕಿರುತ್ತದೆ.<br>ಯೋಜನೆಯಡಿ ಮುಳುಗಡೆಯಾಗಲಿರುವ ಒಟ್ಟಾರೆ ಪ್ರದೇಶದಲ್ಲಿ ಶೇಕಡಾ 96 ರಷ್ಟು ಅರಣ್ಯ ಪ್ರದೇಶವಿದ್ದು, ಅದರಲ್ಲಿ ಶೇಕಡಾ 63 ರಷ್ಟು ವನ್ಯಜೀವಿ ಅರಣ್ಯ ಪ್ರದೇಶವಿದ್ದು, ಈ ಕುರಿತು ಪರಿಸರ ಪ್ರಭಾವದ ಮೌಲ್ಯಮಾಪನ (Environmental Impact Assessment) ಹಾಗೂ ಪರಿಸರಕ್ಕೆ ಉಂಟಾಗಬಹುದಾದ ಪರಿಣಾಮಗಳ ಕುರಿತು Environmental Impact Plan ಅಧ್ಯಯನಗಳ ಉಲ್ಲೇಖಾ ನಿಬಂಧನೆಗಳು (Terms of Reference) ಪ್ರಸ್ತಾವನೆಯನ್ನು ಭಾರತ ಸರ್ಕಾರದ MOEF & CC ಗೆ ಸಲ್ಲಿಕೆಯಾಗಿದ್ದು, ಇದಕ್ಕೆ ತೀರುವಳಿ ಪಡೆಯಬೇಕಾಗಿರುತ್ತದೆ.<br><br>ಸದರಿ ಯೋಜನೆಗೆ ಅವ್ಯಶಕವಿರುವ ಶಾಸನಬದ್ಧ ಅನುಮತಿಗಳನ್ನು ಪಡೆದ ನಂತರ ಅನುಷ್ಠಾನ ಗೊಳಿಸಲಾಗುವುದು. |

***ಸಂಖ್ಯೆ:ಜಸಂಇ 121 ಎನ್‌ಎಲ್‌ಎ 2020***

**(ರಮೇಶ್ ಲ. ಜಾರಕಿಹೊಳಿ)**
**ಜಲಸಂಪನ್ಮೂಲ ಸಚಿವರು**